1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ  ಚನ್ನಗಿರಿ .

ಸಿಸಿ ನಂ**. 396/2023**

| | |
|---|---|
| ಹೆಸರುಃ  ಪ್ರಸನ್ನ | ಚಾಸಾಃ  5 |
| ತಂದೆಯ ಹೆಸರುಃ  ಬೈರಪ್ಪ | ಪ್ರಾಸಾ: 11 |
| ವಯಸ್ಸುಃ   50 ವರ್ಷ | |
| ಉದ್ಯೋಗಃ  ಕಂಟ್ರಾಕ್ಟರ್ | |
| ವಾಸ ಸ್ಥಳಃ  ದೇವರಹಳ್ಳಿ ಗ್ರಾಮ, ಚನ್ನಗಿರಿ   ತಾಃ | |
| ಸಾಕ್ಷಿಗೆ ದಿನಾಂಕಃ 04-03-2026 ರಂದು ಪ್ರಮಾಣ ವಚನ ಬೋಧಿಸಲಾಯಿತು. | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಈಗ ನೋಡುತ್ತಿರುವ  ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ  ಅರೋಪಿತರು ಗುರುತಿಸಿದ ಗುನ್ನ  ಸ್ಥಳದ ಮಹಜರಾಗಿದ್ದು  ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-4(ಡಿ)  ಎಂದು ಗುರುತಿಸಲಾಯಿತು.  ಸದರಿ ಮಹಜರ್ ಗೆ ಸಹಿಯನ್ನು ನಾನು ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಸದರಿ ದಾಖಲೆಗೆ ಸಹಿ ಮಾಡುವ ಸಮಯದಲ್ಲಿ ನನ್ನೊಂದಿಗೆ ಚಾಸಾ-1ರವರು ಹಾಜರಿದ್ದರು.  ನಿಪಿ-4ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಜೊತೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.  ನಂತರ ನಮ್ಮನ್ನು ಪೊಲೀಸರು 1 ಮತ್ತು 2ನೇ ಆರೋಪಿತರ ಮನೆ ಬಳಿ ಕರೆದುಕೊಂಡು ಹೋಗಿರುತ್ತಾರೆ.  ನಂತರ ಪೊಲೀಸರು ಬನ್ನಿಹಟ್ಟಿ ಬಳಿ ಕಳ್ಳತನವಾದ ಜಾಗಕ್ಕೂ ಸಹ ಕರೆದುಕೊಂಡು ಹೋಗಿ ಪೊಟೋವನ್ನು ತೆಗೆದಿರುತ್ತಾರೆ.

ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ 1ನೇ ಆರೋಪಿ ತೋರಿಸಿದ ಸ್ಥಳದ ಅಮಾನತು ಮಹಜರಾಗಿದ್ದು  ಅದನ್ನು ಈಗಾಗಲೇ  ನಿಪಿ-8 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.8(ಸಿ)  ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಸಮಕ್ಷಮ ಏನನ್ನು ವಶಪಡಿಸಿಕೊಂಡಿರುವುದಿಲ್ಲ.  ಈಗ ನೋಡುತ್ತಿರುವ ಪೋಟೋಗಳಲ್ಲಿ ನಾನು ಇದ್ದೇನೆ, ಸದರಿ ಪೊಟೋಗಳನ್ನು ಈಗಾಗಲೇ ನಿಪಿ-5, 9 ಮತ್ತು 10 ಎಂದು ಗುರುತಿಸಲಾಗಿದೆ. ಸದರಿ ಪೊಟೋವನ್ನು ದಿಃ 20-07-2021ರಂದು ತೆಗೆದಿರುತ್ತಾರೆ. ಬನ್ನಿಹಟ್ಟಿ ಬಳಿ ಒಂದು ಪೊಟೋವನ್ನು , ಆಮೇಲೆ 1 ಮತ್ತು 2ನೇ ಆರೋಪಿಯ ಮನೆಯ ಬಳಿ 2 ಪೊಟೋಗಳನ್ನು ತೆಗೆದಿರುತ್ತಾರೆ. ಸದರಿ ಸಮಯಕ್ಕೆ ನಮ್ಮನ್ನು ಕರೆದುಕೊಂಡು ಹೋದ  ಪೊಲೀಸರು ಸದರಿ ಆರೋಪಿತರ ಹೆಸರು ಮತ್ತು ವಿಳಾಸವನ್ನು ಮಹಮ್ಮದ್

ಸಾಹೀಲ್ ಮತ್ತು ಮಹಮ್ಮದ್ ಸಲೀಂ ಎಂದು ತಿಳಿಸಿರುತ್ತಾರೆ. ಸದರಿ ಸಮಯಕ್ಕೆ ಸದರಿ ಸಾಕ್ಷಿದಾರರು ತಮ್ಮ ಅಂಗೈ ಮೇಲೆ ಬರೆದುಕೊಂಡು ಬಂದ ಆರೋಪಿತರ ಹೆಸರನ್ನು ನೋಡಿ ಸಾಕ್ಷ್ಯ ನುಡಿದಿರುವುದನ್ನು ನ್ಯಾಯಾಲಯ ಗಮನಿಸಿರುತ್ತದೆ. ಸದರಿ ಆರೋಪಿತರನ್ನು ನನಗೆ ಗುರುತಿಸಲು ಆಗುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ನಿಪಿ-4 ಮತ್ತು 8 ರ ಮಹಜರಿಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ನಿಪಿ-4 ಮತ್ತು 8 ರ ಮಹಜರನ್ನು ನೋಡಲಾಗಿ ಸಾಕ್ಷಿಯು ನಿಪಿ-4 ಮತ್ತು 8 ರ ಮಹಜರಿಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ದಿಃ 20-07-2021 ರಂದು ಆಗರಬನ್ನಿಹಟ್ಟಿ ಗ್ರಾಮದ ಶಾಮೀರ್ ಜಾನ್ ಎನ್ನುವವರ ಮನೆಯ ಮುಂದೆ ಅರೋಪಿತರು ತೋರಿಸಿದ ಸ್ಥಳದಲ್ಲಿ ಪೊಲೀಸರು ನನ್ನ ಹಾಗೂ ಚಾಸಾ-4 ರವರ ಸಮಕ್ಷಮ ಬೆಳಿಗ್ಗೆ 9.00 ರಿಂದ 9.30 ರವರೆಗೂ ನಿಪಿ-4 ರಂತೆ ಪಂಚನಾಮೆ ಜರುಗಿಸಿ ಅದಕ್ಕೆ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸಾಕ್ಷಿ ಮೌನವಾಗಿರುತ್ತಾರೆ, ಸದರಿ ಸಮಯಕ್ಕೆ ನಿಪಿ-5 ರಂತೆ ಒಂದು ಪೊಟೋವನ್ನು ತೆಗೆದಿರುತ್ತಾರೆಂದರೆ ಸರಿ.

ಅದೇ ದಿನ 1ನೇ ಆರೋಪಿ ವಾಸವಾಗಿರುವ ಮನೆಯಾದ ಕೆಂಪು ಹೆಂಚಿನ ಮನೆಯಲ್ಲಿ ಬೆಳಿಗ್ಗೆ 10.00 ರಿಂದ 11.00 ರವರಗೂ ನಿಪಿ-8 ರಂತೆ ಪಂಚನಾಮೆ ಜರುಗಿಸಿ ಅದಕ್ಕೆ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿ. ಸದರಿ ಸಮಯಕ್ಕೆ ನಿಪಿ-9 ಮತ್ತು 10 ರಂತೆ ಒಂದು ಪೊಟೋವನ್ನು ತೆಗೆದಿರುತ್ತಾರೆಂದರೆ ಸರಿ. ಸದರಿ ಸಮಯಕ್ಕೆ ಕೆಎ-26/ಇಜೆ-3306 ನೇ ಪಲ್ಸರ್ ಬೈಕ್ , ಒಂದು ಚಾಕು, ಒಂದುಮೊಬೈಲ್ ಪೋನ್ ಮತ್ತು ಒಂದು ಹಿಯರ್ ಪೋನ್ ನ್ನು ಆರೋಪಿ ಹಾಜರುಪಡಿಸಿದ್ದು ಅದನ್ನು ನಮ್ಮ ಸಮಕ್ಷಮ ಹಾಜರುಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳಲ್ಲಿ ಅದರಲ್ಲಿ ಬೈಕ್ ನ್ನು ಚಾಸಾ-8 ರವರು ನ್ಯಾಯಾಲಯದ ಆದೇಶದ ಮೇರೆಗೆ ಮಧ್ಯಂತರ ವಶಕ್ಕೆ ಪಡೆದಿರುತ್ತಾರೆ. ಮು.ಮಾ-2 ಮತ್ತು 3 ನ್ನು ಚಾಸಾ-1 ರವರು ನ್ಯಾಯಾಲಯದ ಮಧ್ಯಂತರ ಆದೇಶದ ಮೇರೆಗೆ ಅವರ ಅಭಿರಕ್ಷೆಗೆ ಪಡೆದಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರು ಇರುವ

ಮು.ಮಾ-1 ನ್ನು ನೋಡಿದರೆಗುರುತಿಸಿರುತ್ತಾರೆ. ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯೇ ನಿಪಿ-9 ಮತ್ತು 10 ರಲ್ಲಿ ಕಾಣಿಸುತ್ತಿದ್ದ ಸದರಿ ವ್ಯಕ್ತಿಗಳೇ ಸದರಿ ಮದ್ದೆಮಾಲುಗಳನ್ನು ಹಾಜರಪಡಿಸಿರುವ ವಿಚಾರ ನನಗೆ ಗೊತ್ತಿದ್ದರು ಸಹ ನಾನು ಗೊತ್ತಿಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ,

(ಮಧ್ಯಹ್ನದ ಊಟದ ಸಮಯವಾದ್ದರಿಂದ ಆರೋಪಿಯ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು).

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆಎಂಎಫ್ ಸಿ, ಚನ್ನಗಿರಿ.**

ನ್ಯಾಯಾಲಯದ 2 ನೇ ಅವಾಧಿಯಲ್ಲಿ ಸಾಕ್ಷಿಯನ್ನು ಪುನ ಪಾಟೀ ಸವಾಲಿಗೆ ಕರೆಯಲಾಗಿ ಸಾಕ್ಷಿ ಗೈರು ಹಾಜರಿರುತ್ತಾರೆ.

ಮಾನ್ಯ ಸ ಸ ಅರವರು ಪಾಟೀ ಸವಾಲಿಗೆ ಸಮಯಾವಕಾಶ ನೀಡಲು ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆಎಂಎಫ್ ಸಿ, ಚನ್ನಗಿರಿ.**

1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ  ಚನ್ನಗಿರಿ .

ಸಿಸಿ ನಂ**. 396/2023**

| | |
|---|---|
| ಹೆಸರುಃ  ರೆಹಮತ್ ವುಲ್ಲಾ | ಚಾಸಾಃ 8 |
| ತಂದೆಯ ಹೆಸರುಃಅಬ್ದುಲ್ ಖಲೀಲ್ | ಪ್ರಾಸಾ: 10 |
| ವಯಸ್ಸುಃ   40 ವರ್ಷ | |
| ಉದ್ಯೋಗಃ ಹೂವಿನ ವ್ಯಾಪಾರಿ | |
| ವಾಸ ಸ್ಥಳಃ  ಚನ್ನಗಿರಿ | |
| ಸಾಕ್ಷಿಗೆ ದಿನಾಂಕಃ 04-03-2026 ರಂದು ಪ್ರಮಾಣ ವಚನ ಬೋಧಿಸಲಾಯಿತು. | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

1ನೇ ಅರೋಪಿ ನನ್ನ ಮಗ, ಈ ಪ್ರಕರಣ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು  ಹೇಳಿಕೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ಹೇಳಿಕೆಯನ್ನು ನೋಡಲಾಗಿ ಸಾಕ್ಷಿಯು  ಹೇಳಿಕೆಗೆ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು  ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

1ನೇ ಆರೋಪಿ ಕೆಲಸಕ್ಕೆ ಹೋಗುತ್ತಿದ್ದರಿಂದ ಆತನಿಗೆ ಪಲ್ಸರ್ ಬೈಕ್ ನ್ನು ಕೊಡಿಸಿ ಆತನ ಹೆಸರಿಗೆ ನೊಂದಾಯಿಸಿಕೊಂಡಿರುತ್ತೇನೆ. ದಿಃ 01-07-2021 ರಂದು ಆತ ನನಗೆ ಒಂದು ಹೊಸ ಫೋನ್ ಕೊಟ್ಟಾಗ ಸದರಿ ಫೋನು ಯಾರದು  ಮತ್ತು ಎಲ್ಲಿಂದ ತಂದಿದ್ದೀಯ ಎಂದು ಕೇಳಿದಾಗ ಆತ ಹೊಸ ಫೋನ್ ಕೊಡಬೇಕುಎಂದು ತೆಗೆದುಕೊಂಡು ಬಂದಿರುತ್ತೇನೆ ಎಂದು ಹೇಳಿರುತ್ತಾನೆ.  ಆಗ 1ನೇ ಅರೋಪಿ ಫೋನ್ ಕೊಡಿಸಿದ ವಿಚಾರವಾಗಿ ನಾನು ಖುಷಿಯಿಂದ ಇದ್ದು. ಆಗ ನಾನು ಮತ್ತು ನನ್ನ ಮಗನಾದ 1ನೇ ಅರೋಪಿ ಸೇರಿ ಸದರಿ ಫೋನ್ ನಲ್ಲಿ ಸೆಲ್ಫಿಯನ್ನು ತೆಗೆದಿರುತ್ತೇವೆ ನಂತರ ಸದರಿ ಫೋನ್ ನ್ನುನನಗೆ ಬರದ ಕಾರಣ ಅದನ್ನು ಮನೆಯಲ್ಲಿ ಇಟ್ಟಿದ್ದೆ ಎಂದರೆ ಸರಿ.

ದಿಃ 20-07-2021 ರಂದುಪೊಲೀಸರು ನನ್ನ ಮಗನನ್ನು ನನ್ನ ಮನೆಗೆ ಕರೆದುಕೊಂಡು ಬಂದಿದ್ದು ಅಗ ನನ್ನ ಮಗ ಮತ್ತು 2ನೇ ಅರೋಪಿ ಸೇರಿ ದಿಃ 30-06-2021 ರಂದು ರಾತ್ರಿ ಯಾರದ್ದೊ ಬೈಕ್ ನ್ನು ಅಡ್ಡ ಹಾಕಿ ಅವರಿಗೆ ಚಾಕು ತೋರಿಸಿ ಬೆದರಿಕೆ ಹಾಕಿ ಮೊಬೈಲ್ ನ್ನು ಕಿತ್ತುಕೊಂಡು ಬಂದಿರುತ್ತಾರೆ ಎಂಬ ವಿಚಾರ ನನಗೆ ತಿಳಿಯಿತು ಎಂದರೆ ಸರಿ. ನಂತರ ಮನೆಯಲ್ಲಿಟ್ಟಿದ್ದ ಪೋನ್ ಮತ್ತು ಆತ ಬಳಸಿದ ಬೈಕ್ ಕೆಎ-26/ಇಜೆ-3306 ನ್ನು ಹಾಗೂ ಕೃತ್ಯಕ್ಕೆ ಬಳಸಿದ ಚಾಕು ಮತ್ತು ಹಿಯರ್ ಪೋನ್ ನ್ನು ನಮ್ಮ ಮನೆಯಿಂದ ಪೊಲೀಸರು ಅಮಾನತುಪಡಿಸಿಕೊಂಡು ಹೋಗಿರುತ್ತಾರೆ ಎಂದರೆ ಸರಿ. ಸದರಿ ವಿಚಾರವಾಗಿ ನಾನು ಪೊಲೀಸರಿಗೆ ದಿಃ 20-07-2021 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ, ಸದರಿ ವಿಚಾರವಾಗಿ ಹೇಳಿಕೆಯನ್ನು ನೀಡಿದ್ದರು ಸಹ 1ನೇ ಅರೋಪಿ ನನ್ನ ಮಗನಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಪೊಲೀಸರು ನಮ್ಮ ಮನೆಯಿಂದ ತೆಗೆದುಕೊಂಡು ಹೋದ ಮೊಬೈಲ್ ಪೋನ್ , ಚಾಕು ಮತ್ತು ಬೈಕ್ , ಹಿಯರ್ ಪೋನ್ ನ್ನು ನೋಡಿದರೆ ಗುರುತಿಸುತ್ತೇನೆ. ಅದರಲ್ಲಿ ಬೈಕ್ ನ್ನು ನಾನೇ ನ್ಯಾಯಾಲಯದ ಆದೇಶದ ಮೇರೆಗೆ ಮಧ್ಯಂತರ ವಶಕ್ಕೆ ಪಡೆದಿರುತ್ತೇನೆ. ಮು.ಮಾ-2 ಮತ್ತು 3 ನ್ನು ಚಾಸಾ-1 ರವರು ನ್ಯಾಯಾಲಯದ ಮಧ್ಯಂತರ ಆದೇಶದ ಮೇರೆಗೆ ಅವರ ಅಭಿರಕ್ಷೆಗೆ ಪಡೆದಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಈಗಾಗಲೇ ಮು,ಮಾ-1 ಎಂದು ಗುರುತಿಸಿದ ಚಾಕುವನ್ನು ಗುರುತಿಸಲು ಸೂಚಿಸಿದಾಗ ಸದರಿ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಿನಾಂಕದಂದು ನನ್ನ ಮಗನೊಂದಿಗೆ ಇದ್ದ 2 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಸದರಿ 2ನೇ ಆರೋಪಿ ನ್ಯಾಯಾಲಯದಲ್ಲಿ ಗೈರು ಹಾಜರಿದ್ದು ಆರೋಪಿ ಪರ ವಕೀಲರು ಸದರಿ ಆರೋಪಿಯ ಗುರುತಿಸುವಿಕೆಗೆ ಯಾವುದೇ ತಕರಾರು ಇಲ್ಲಎಂದು ನಿವೇದಿಸಿಕೊಂಡಿರುತ್ತಾರೆ. ಮು.ಮಾ-1 ನ್ನು ನಾನೇ ಹಾಜರುಪಡಿಸಿದ್ದರು ಸಹ ಈ ದಿನ ಗುರುತಿಸಲು ಆಗುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು - ಆರೋಪಿತರ ಪರ ಶ್ರೀ ವಿ ಆರ್ ಆರ್ ವಕೀಲರಿಂದ –**

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ. ನಾನು ನನ್ನ ಹೇಳಿಕೆಯಲ್ಲಿ ನಮೂದಿಸಿದ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಮು.ಮಾ-1 ಕೂಕ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿ.

**ಮರು ವಿಚಾರಣೆ  ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು**

**ಜೆಎಂಎಫ್ ಸಿ,  ಚನ್ನಗಿರಿ.**

**1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .**

**ಸಿ.ಸಿ. ಸಂಖ್ಯೆಃ 396/2023**

ಹೆಸರುಃ  ರುದ್ರೇಶ್ ಎಂ    ಸಿ.ಡಬ್ಲ್ಯೂಃ  10

ತಂದೆಃ    ಮೂಡ್ಲಪ್ಪ

ವಯಸ್ಸುಃ    47 ವರ್ಷ    ಪಿ.ಡಬ್ಲ್ಯೂಃ 9

ಉದ್ಯೋಗಃ  ಹೆಚ್ ಸಿ 287, ನ್ಯಾಮತಿ ಪೋ.ಠಾ.

ವಾಸ ಸ್ಥಳಃ    ಚನ್ನಗಿರಿ.

ಸಾಕ್ಷಿಗೆ  ದಿನಾಂಕಃ 08-12-2025    ರಂದು   ಪ್ರಮಾಣ ವಚನ ಬೋಧಿಸಲಾಗಿ ಸಾಕ್ಷಿ ಯ ಹೇಳಿಕೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು 2019  ರಿಂದ  2022 ವರೆಗೆ ಮುಖ್ಯ ಪೇದೆಯಾಗಿ  ಚನ್ನಗಿರಿ ಪೊಲಿಸ್ ಠಾಣೆಯಲ್ಲಿ  ಕರ್ತವ್ಯನಿರ್ವಹಿಸಿರುತ್ತೇನೆ.

ದಿಃ 18.07.2021 ರಂದು ನನಗೆ ಮತ್ತು  ಚಾಸಾ-9, 11 ರವರನ್ನು ಮಾಲು ಮತ್ತು ಆರೋಪಿಯ ಪತ್ತೆ ಕಾರ್ಯಕ್ಕೆ ನಿಯೋಜಿಸಿದ್ದು ಅದರಂತೆ ದಿಃ 19-07-2021 ರಂದು  ನಾವು ಪತ್ತೆ ಕಾರ್ಯದಲ್ಲಿರುವಾಗ ಚಾಸಾ-1ರವರು ನಮ್ಮ ಫೋನ್ ನ್ನುಯಾರೋ ಕಳ್ಳರು ಕಿತ್ತುಕೊಂಡು ಹೋಗಿದ್ದು ಹಾಗೂ  ನಾನು ಹೊಸ ಮೊಬೈಲ್ ನ್ನು ಖರೀದಿ ಮಾಡಿದ್ದು  ಸದರಿ ಫೋನ್ ಗೆ  ಗೂಗಲ್ ಅಕೌಂಟ್ ಇನ್ ಸ್ಟಾಲ್ ಮಾಡುವಾಗ ಸದರಿ ಗೂಗಲ್ ಅಕೌಂಟ್ ನಲ್ಲಿದ್ದ ಮಾಹಿತಿ ಹೊಸ ಫೋನ್ ಗೆ ಬಂದಿದ್ದು. ಅದರಂತೆ ಕಳುವಾದನನ್ನ ಫೋನ್ ನಲ್ಲಿ ಇದ್ದ ಭಾವಚಿತ್ರಗಳು ಸಹ ಇನ್ ಸ್ಟಾಲ್ ಆಗಿರುವುದಾಗಿ ಮಾಹಿತಿ ನೀಡಿರುತ್ತಾರೆ. ಚಾಸಾ-1ರವರ ಮೊಬೈಲ್ ನಲ್ಲಿ ಇನ್ ಸ್ಟಾಲ್ ಆದ ಪೊಟೋಗಳನ್ನು ನನ್ನ ಹಾಗೂ ಚಸಾ-9 ರವರ ಫೋನ್ ಗೆ ಕಳುಹಿಸಿರುತ್ತಾರೆ.ಸದರಿ ಪೋಟೋಗಳ ಆಧಾರದ ಮೇಲೆ ಚನ್ನಗಿರಿ ಟೌನ್ ನಲ್ಲಿ ಗಸ್ತು ಕಾರ್ಯ ಮಾಡಿ ಬಾತ್ಮಿದಾರರರಿಂದ ಮಾಹಿತಿಯನ್ನು ಪಡೆದಾಗ ಸದರಿ ಪೊಟೋಗಳಲ್ಲಿರುವ  ವ್ಯಕ್ತಿ ಮಹಮ್ಮದ್ ಸುಹೇಲ್ ಬಿನ್ ರೆಹಮತ್ ವೂಲ್ಲ , ಉಪಾರಹಟ್ಟಿ ವಾಸ, ಚನ್ನಗಿರಿ ನಗರ  ಎಂದು ತಿಳಿಸಿದ್ದು , ನಂತರ ಆತ ಮತ್ತು ಆತನ ಸಹಚರನಾದ ಇನ್ನೊಬ್ಬ ವ್ಯಕ್ತಿ ಅಜ್ಜಿಹಳ್ಳಿ ವೃತ್ತದಲ್ಲಿರುವ ಕುರಿತು ಮಾಹಿತಿ

ಬಂದಿರುತ್ತದೆ.  ನಂತರ ನಾವು ತಕ್ಷಣ ಸದರಿ ಸ್ಥಳಕ್ಕೆ ಹೋಗಿ ಆತನನ್ನು ಮತ್ತು ಅತನ ಜೊತೆಗಿದ್ದ ಮಹಮ್ಮದ್ ಸಲೀಂ ಬಿನ್ ಮಹಬೂಬ್ ಸಾಬ್ ನನ್ನು ವಶಕ್ಕೆ ಪಡೆದು ರಾತ್ರಿ 8.00ರ ಸಮಯಕ್ಕೆ ಚಾಸಾ-14ರವರ ಸಮಕ್ಷಮ ಹಾಜರುಪಡಿಸಿರುತ್ತೇವೆ.

ಚಾಸಾ-14ರವರು ಸದರಿ ಆಸಾಮಿಗಳನ್ನು ವಿಚಾಸಿದಾಗ, ಅವರು ತಾವು ಪರಸ್ಪರ ಸಂಬಂಧಿಕರೆಂದು ಖರ್ಚಿಗಾಗಿ ಹಣವಿಲ್ಲದ ಕಾರಣ ಎಲ್ಲಿಯಾದರು ಹೋಗಿ ರಸ್ತೆಯಲ್ಲಿ ಹೋಗುತ್ತಿರುವ ವ್ಯಕ್ತಿಗಳನ್ನು ತಡೆದು ಅವರಿಂದ ಸಿಗುವ ವಸ್ತುಗಳನ್ನು ಕಸಿದುಕೊಳ್ಳುವ ಯೋಜನೆ ರೂಪಿಸಿರುವುದಾಗಿ ತಿಳಿಸಿರುತ್ತಾರೆ.

ಅದರಂತೆ ದಿಃ 30-06-2021 ರಂದು 1ನೇ ಆರೋಪಿಯ ಬೈಕ್ ಆದ ಕೆಎ/27-ಇಜಿ-3306 ಪಲ್ಸರ್ ಬೈಕ್ ನಲ್ಲಿ ಅಗರಬನ್ನಿಹಟ್ಟಿಗೆಹೋಗಿ ಅಲ್ಲಿಂದ ಬೀರೂರು-ಚನ್ನಗಿರಿ ರಸ್ತೆಯಲ್ಲಿ ಸುತ್ತುತ್ತಾರೆ. ಸದರಿ ರಸ್ತೆಯಲ್ಲಿ ಯಾರು ದೊರೆಯದ ಕಾರಣ ಆಗರಬನ್ನಿಹಟ್ಟಿಗೆ ಹಿಂದಿರುತ್ತಾರೆ, ಆಗ ಒಬ್ಬ ವ್ಯಕ್ತಿ ಬೈಕ್ ನಲ್ಲಿ ಬರುವುದನ್ನು ನೋಡಿ ವಿಳಾಸವನ್ನು ಕೇಳುವ ನೆಪದಲ್ಲಿ ಸದರಿ ಬೈಕ್ ನ್ನು ನಿಲ್ಲಿಸಿದ್ದು, ಸದರಿ ವ್ಯಕ್ತಿಯನ್ನು ಮಾತನಾಡಿಸುತ್ತಾ 1ನೆ ಆರೋಪಿ ತನ್ನ ಬೈಕ್ ನಲ್ಲಿದ್ದ ಚಾಕುವನ್ನು ತೆಗೆದು ಸದರಿ ಬೈಕ್ ಸವಾರನ ಕುತ್ತಿಗೆಗೆ ಹಿಡಿದಿದ್ದು, 2ನೇ ಆರೋಪಿ ಆತನ ಬಳಿ ಇದ್ದ ಬೆಲೆ ಬಾಳುವ ಬಂಗಾರ , ಮೊಬೈಲ್ ಹಣ ಇದ್ದರೆ ಕೊಡು ಎಂದು ಕೇಳಿರುತ್ತಾನೆ. ಆಗ ಆತ ತನ್ನ ಬಳಿ ಏನು ಇಲ್ಲವೆಂದು ಹೇಳಿದಾಗ 2ನೇ ಆರೋಪಿ ಸದರಿ ಆಸಾಮಿಯ ಜೇಬಿನಲ್ಲಿದ್ದ  ಹೆಡ್ ಫೋನ್  ಮತ್ತು  ಮೊಬೈಲ್ ನ್ನು ಕಸಿದುಕೊಳ್ಳುತ್ತಾನೆ. ನಂತರ ಸದರಿ ಆರೋಪಿತರು ಸ್ಥಳದಿಂದ ಹೋಗಿದ್ದು ಸದರಿ 1ನೇ ಆರೋಪಿ ತನ್ನ ತಂದೆಗೆ ಹೊಸ ಫೋನ್ ಖರೀದಿಸಿರುವುದಾಗಿ ಸದರಿ ಫೋನ್ ನಲ್ಲಿದ್ದ ಸಿಮ್ ನ್ನುತೆಗೆದು ಬಿಸಾಕಿರುತ್ತಾನೆ, ಸದರಿ ಫೋನ್ ನಲ್ಲಿ 1ನೇ ಅರೋಪ ಮತ್ತು ಆತನ ತಂದೆ ಫೋಟೋ ತೆಗೆದುಕೊಂಡಿರುತ್ತಾರೆ.   ಸದರಿ ಆಧಾರದ ಮೇಲೆ ಆತನನ್ನು ಹಿಡಿದಿದ್ದು ಠಾಣೆಯಲ್ಲಿ ಆರೋಪಿತರು ಸದರಿ ವಿಚಾರವಾಗಿ ಒಪ್ಪಿರುತ್ತಾರೆ, ಸದರಿ ವಿಚಾರವಾಗಿ ನಾನು ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

ಈ ದಿನ 1 ಮತ್ತು 2 ನೇ ಆರೋಪಿ ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು ಆರೋಪಿ ಯನ್ನು ಗುರುತಿಸುವ ಪ್ರಕ್ರಿಯೆಗೆ ಯಾವುದೇ ತಕರಾರು ಇಲ್ಲ ಎಂದು ಮೌಖಿಕವಾಗಿ ನಿವೇದಿಸಿಕೊಂಡಿರುತ್ತಾರೆ.ಈ ಪ್ರಕರಣದ ಮಾಲುಗಳಾದ ಮೊಬೈಲ್

ಹೆಡ್ ಫೋನ್ , ಬೈಕ್ ಮತ್ತು ಕತ್ತಿಯನ್ನುನೋಡಿದರೆ ಗುರುತಿಸುತ್ತೇನೆ. ಸದರಿ ವಸ್ತುಗಳಲ್ಲಿ ಮೊಬೈಲ್ ಹೆಡ್ ಫೋನ್ , ಬೈಕ್ ಬಿಡುಗಡೆಯಾಗಿದ್ದು, ನ್ಯಾಯಾಲಯದ ಮುಂದೆ ಇರುವ ಕತ್ತಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಚಾಕುವನ್ನು ಈಗಾಗಲೇ ಮು,ಮಾ-1 ಎಂದು ಗುರುತಿಸಲಾಗಿದೆ.

**ಪಾಟೀಸವಾಲು ಆರೋಪಿತರ ಪರ ಶ್ರೀ ವಿ ಆರ್ ಆರ್ ವಕೀಲರಿಂದಃ**

18-07-2021ರ್ಹದು ಯಾವ ಸಮಯಕ್ಕೆ ನನ್ನನ್ನು ಸದರಿ ಕರ್ತವ್ಯಕ್ಕೆ ನಿಯೋಜನೆ ಮಾಡಿದ್ದರು ಎಂದರೆ ಸಾಕ್ಷಿ 12.00 ಗಂಟೆಗೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನನ್ನ ಹೇಳಿಕೆಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ನಾನು ಚಾಸಾ-9 ಮತ್ತು 11 ರವರು ನಮ್ಮ ಬೈಕ್ ಗಳಲ್ಲಿ ಪತ್ತೆ ಕಾರ್ಯಾಕ್ಕಾಗಿ ಹೋಗಿರುತ್ತೇವೆ, ಸದರಿ ವಿಚಾರವನ್ನು ನನ್ನ ಹೇಳಿಕೆಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸದರಿ ಅಜ್ಜಿಹಳ್ಳಿ ವೃತ್ತದಲ್ಲಿ ಶಿವಮೊಗ್ಗ - ದಾವಣಗೆರೆ- ಭದ್ರಾವತಿ ವೃತ್ತವಾಗಿದ್ದು ಅಲ್ಲಿ ಅಂಗಡಿಗಳ ಮತ್ತು ಹೊಟೇಲ್ ಗಳು ಇವೆ ಎಂದರೆ ಸರಿ. ಸದರಿ ವೃತ್ತದಲ್ಲಿ ಆರೋಪಿತರುಎಲ್ಲಿ ಇದ್ದರು ಎಂದರೆ ಸಾಕ್ಷಿ ಭದ್ರಾವತಿ ರಸ್ತೆಯ ದರ್ಗಾದ ಪಕ್ಕದ ಹೊಟೇಲ್ ನಲ್ಲಿದ್ದರು ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನನ್ನ ಹೇಳಿಕೆಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ಆರೋಪಿತರು ಸದರಿ ದಿನದಂದು ಯಾವ ಬಣ್ಣದ ಬಟ್ಟೆ ಧರಿಸಿದ್ದರು ಎಂದು ನನಗೆ ನೆನಪಿಲ್ಲ. ಚಾಸಾ-1ರವರಿಂದ ದಿಃ 30-06-2021ರಂದು ಮೊಬೈಲ್ ನ್ನು ಕಸಿದುಕೊಳ್ಳುವ ಸಮಯಕ್ಕೆ ನಾನು ಹಾಜರಿರಲಿಲ್ಲ ಎಂದರೆ ಸರಿ. ಕಳುವು ಮಾಡಿದ ವಿಚಾರ ಚಾಸಾ-14ರವರ ಹೇಳಿಕೆ ಮೇರೆಗೆ ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಆರೋಪಿತರ ಹೇಳಿಕೆ ಮೇರೆಗೆ ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಮು.ಮಾ-1 ನ್ನು ನಾನು ನೋಡಿರುತ್ತೇನೆ. ಸದರಿ ಕತ್ತಿ ಕಪ್ಪು ಬಣ್ಣದ ಹಿಡಿಯನ್ನು ಹೊಂದಿದ್ದು 7-8 ಇಂಚು ಉದ್ದದ ಸ್ಟೀಲ್ ಚಾಕುವಾಗಿತ್ತು. ಕತ್ತಿಗೂ ಚಾಕುವಿಗೂ ವ್ಯತ್ಯಾಸವಿದೆ ಎಂದರೆ ಸರಿ. ಚಾಸಾ-14ರವರು ಸದರಿ ದಿನದಂದು ಕತ್ತಿಯನ್ನು ವಶಕ್ಕೆ ಪಡೆದರೋ ಅಥವಾ ಚಾಕುವನ್ನೊ ಎಂದರೆ ಸಾಕ್ಷಿ ಚಾಕುವನ್ನು ಎಂದು ನುಡಿಯುತ್ತಾರೆ. ಈ ಪ್ರಕರಣದ ಬೈಕ್ ಕಪ್ಪು ಬಣ್ಣದ ಬೈಕ್ ಅಗಿದೆ,

ನಾನು ಮತ್ತು ಚಾಸಾ1ರವರು ಸೇರಿ ಸದರಿ ಗೂಗಲ್ ಭಾವಚಿತ್ರವನ್ನು

ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ, ನಾನು ಹೇಳಿದಂತೆ ಆರೋಪಿತರು ಚಾಸಾ-1 ರವರಿಂದ ಯಾವುದೇ ಮೊಬೈಲ್ ನ್ನು ಕಿತ್ತುಕೊಂಡಿಲ್ಲ ಎಂದರೆ ಸರಿಯಲ್ಲ.

ನಾನು ಮತ್ತು ಚಾಸಾ1ರವರು ಸೇರಿ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)** **ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
ಮತ್ತು ಜೆಎಂಎಫ್ ಸಿ, ಚನ್ನಗಿರಿ.

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ , ಚನ್ನಗಿರಿ .**

**ಸಿ.ಸಿ. ಸಂಖ್ಯೆಃ 396/2023**

ಹೆಸರುಃ ರೂಪೇಶ್ ಜಿ ವಿ ಸಿ.ಡಬ್ಲ್ಯೂಃ 12

ವಯಸ್ಸುಃ 46 ಪಿ.ಡಬ್ಲ್ಯೂಃ 7

ತಂದೆಃ ರಂಗ್ಯಾ ನಾಯಕ್

ಉದ್ಯೋಗಃ ಹೆಚ್ ಸಿ ಚನ್ನಗಿರಿ ಪೋ.ಠಾ.

ವಾಸ ಸ್ಥಳಃ ಚನ್ನಗಿರಿ.

ಸಾಕ್ಷಿಗೆ ದಿನಾಂಕಃ 11.06.2025 ರಂದು ಪ್ರಮಾಣ ವಚನ ಬೋಧಿಸಲಾಗಿ ಸಾಕ್ಷಿ ಯ ಹೇಳಿಕೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಯಿತು.

**ಸಅಅರವರಿಂದ ಮುಖ್ಯ ವಿಚಾರಣೆ**

2019 ರಿಂದ ಇಲ್ಲಿಯವರೆಗೆ ಮುಖ್ಯ ಪೇದೆಯಾಗಿ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಕತರ್ವ್ಯನಿರ್ವಹಿಸುತ್ತಿದ್ದೇನೆ.

ದಿಃ 18.07.2021 ರಂದು ಬೆಳಗ್ಗೆ 11.00 ಗಂಟೆ ಸಮಯದಲ್ಲಿ ಚಾಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರು ಅರ್ಜಿಯನ್ನು ಸಲ್ಲಿಸಿರುತ್ತಾರೆ, ಸದರಿ ದೂರಿನ ಮೇರೆಗೆ ಠಾಣಾ ಗುನ್ನೆ ಸಂಃ 251/2021ರ ಭಾ.ದಂ.ಪ್ರ.ಸಂ. ಕಲಂ 392 ರ ಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ.

ಸಾಕ್ಷಿ ಕಡತದಲ್ಲಿ ಸದರಿ ದೂರನ್ನು ನೋಡಿ ಗುರುತಿಸಿದ್ದು ಸದರಿ ದೂರನ್ನು ಈಗಾಗಲೇ ನಿ ಪಿ 1 ಎಂದು ಗುರುತಿಸಲಾಗಿದೆ . ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 1(ಬಿ) ಎಂದು ಗುರುತಿಸಲಾಯಿತು . ಸದರಿ ದೂರಿನ ಮೇಲೆ ದಾಖಲಿಸಲಾದ ಪ್ರ ವ ವ ಸಾಕ್ಷಿ ನೋಡಿ ಗುರುತಿಸಿದ್ದು , ಸದರಿ ಪ್ರ.ವ.ವಯನ್ನು ನಿ ಪಿ 7 , ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 7(ಎ) ಎಂದು ಗುರುತಿಸಲಾಯಿತು .

ಸದರಿ ಪ್ರಕರಣವನ್ನು ಮುಂದಿನ ಕ್ರಮಕ್ಕಾಗಿ ಚಾಸಾ.14 ರವರಿಗೆ ವಹಿಸಿಕೊಟ್ಟಿರುತ್ತೇನೆ.

ದಿನಾಂಕಃ 20.07.2021 ರಂದು 1 ಮತ್ತು 2 ನೇ ಆರೋಪಿತರು ಸಿಕ್ಕಿರುವ ಕುರಿತು ಚಾಸಾ.14 ರವರು ನಮಗೆ ಆರೋಪಿತರ ಬೆಂಗಾವಲಿಗೆ ಬರಲು ತಿಳಿಸಿರುತ್ತಾರೆ. ಆಗ ಅಲ್ಲೇ ಇದ್ದ ಚಾಸಾ.4 ಮತ್ತು 5 ರವರ ಮೇಲೆ ಚಾಸಾ.14 ರವರು ಪಂಚರಾಗಿ ಸಹಕರಿಸಲು ನೇಟೀಸನ್ನು ಜಾರಿ ಮಾಡಿ ಆರೋಪಿತರು ತೋರಿಸಿದ ಕೃತ್ಯ ನಡೆದ ಸ್ಥಳವಾದ ಅಗರಬನ್ನಿಹಟ್ಟಿ ಗ್ರಾಮದ ಶಾಮೀರ್ ಜಾನ್ ರವರ ಮನೆಯ ಮುಂದೆ ಆರೋಪಿತರು ವಾಹನವನ್ನು ನಿಲ್ಲಿಸಲು ಹೇಳಿದ್ದು ಅದರಂತೆ ನಾವು ವಾಹನದಿಂದ ಇಳಿದಿದ್ದು , ಆರೋಪಿತರು ದಿಃ 18.07.2021 ರಂದು ರಾತ್ರಿ 11.00 ಗಂಟೆಗೆ ಅಗರನಿನ್ನಹಟ್ಟಿಯಿಂದ ಬೀರೂರು ಸಮಸಗಿ ರಸ್ತೆಯಲ್ಲಿ ಹೋಗಿ ವಾಪಾಸ್ಸು ಅಗರಬನ್ನಿಹಟ್ಟಿ ಗ್ರಾಮಕ್ಕೆ ಬರುತ್ತಿರುವಾಗ ಒಬ್ಬ ವ್ಯಕ್ತಿ ಬೈಕ್ ನಲ್ಲಿ ಬರುತ್ತಿದ್ದು ಆತನಿಗೆ ವಿಳಾಸ ಕೇಳುವ ನೆಪದಲ್ಲಿ ಆತನ ಬೈಕ್ ನಿಲ್ಲಿಸಲು ಕೇಳಿದ್ದು ಆತ ಬೈಕ್ ನಿಲ್ಲಿಸಿದಾಗ ಸದರಿ ಬೈಕ್ ಸವಾರನಿಗೆ ಆರೋಪಿತರು ಚಾಕುವನ್ನು ತೋರಿಸಿ ನಿನ್ನ ಬಳಿ ಇರುವ ದುಡ್ಡು ಮತ್ತು ಆಭರಣಗಳನ್ನು ಕೊಡುವಂತೆ ಕೇಳಿರುತ್ತಾರೆಂದು ಆಗ ಸದರಿ ಚಾಲಕ ತನ್ನ ಬಳಿ ಯಾವುದೇ ದುಡ್ಡು ಮತ್ತು ಆಭರಣ ಇಲ್ಲ ಎಂದು ತಿಳಿಸಿರುವುದಾಗಿ ತನ್ನ ಬಳಿ ಒಂದು ಮೊಬೈಲ್ ಮತ್ತು ಹಿಯರ್ ಫೋನ್ ಇರುವುದಾಗಿ ತಿಳಿಸಿದ್ದು ಅದನ್ನು 1 ನೇ ಆರೋಪಿ ಕಸಿದುಕೊಂಡಿರುವುದಾಗಿ ನಮಗೆ ಆರೋಪಿತರು ತಿಳಿಸಿರುತ್ತಾರೆ. ಸದರಿ ಸ್ಥಳದಲ್ಲಿ ನಾವು 9.00 ರಿಂದ 9.30 ರ ವರಗೆ ಪಂಚನಾಮಯನ್ನು ಜರುಗಿಸಿರುತ್ತೇವೆ. ಸದರಿ ಸಮಯಕ್ಕೆ ನಾನು ಮತ್ತು ಆರೋಪಿತರು ಚಾಸಾ.14 ರವರು ಮತ್ತು ಇತರೆ ಇಲಾಖೆ ಸಿಬ್ಬಂದಿಯವರು ಸಹಿ ಮಾಡಿರುತ್ತೇವೆ. ಸದರಿ ಸಮಯಕ್ಕೆ ಭಾವಚಿತ್ರವನ್ನು ತೆಗೆಯಲಾಯಿತು.

ಸಾಕ್ಷಿ ಕಡತದಲ್ಲಿನ ಸದರಿ ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.4 ಎಂದು ಗುರುತಿಸಿದ್ದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.4(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಕಡತದಲ್ಲಿನ ಸದರಿ

ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.5 ಎಂದು ಗುರುತಿಸಲಾಗಿದೆ. ನಂತರ ಜೀಪಿನಲ್ಲಿ ಪಂಚರ ಮತ್ತು ಆರೋಪಿತರೊಂದಿಗೆ ಗದ್ದಿಗೆ ಮಠದ ಹತ್ತಿರ ಇರುವ 1 ನೇ ಆರೋಪಿಯ ಮನೆ ಬಳಿ ಬಂದು ಸದರಿ ಸಮಯಕ್ಕೆ ಒಂದು ಮೊಬೈಲ್ , ಇಯರ್ ಫೋನ್ ಮತ್ತು ಬೈಕ್ ಇದ್ದು ಸದರಿ ಬೈಕ್ ನಲ್ಲಿ ಚಾಕುವು ಸಹ ಇರುತ್ತದೆ. ಅವನ್ನು ಪಂಚರ ಸಮಕ್ಷಮ ಅಮಾನತುಪಡಿಸಿಕೊಂಡು ಭಾವಚಿತ್ರವನ್ನು ತೆಗೆಯಲಾಗಿದೆ. ಸದರಿ ಬೈಕ್ ಸಂಖ್ಯೆ ಕೆ ಎ 27 ಇಜಿ 3306 ಆಗಿರುತ್ತದೆ. ಸಾಕ್ಷಿ ಕಡತದಲ್ಲಿನ 1 ನೇ ಆರೋಪಿ ತೋರಿಸಿದ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.8 ಎಂದು ಹಾಗೂ ಅದರಲ್ಲಿನಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ನಿಶಾನೆಗೊಳಿಸಲಾಯಿತು. ಸದರಿ ಪಂಚನಾಮೆಯನ್ನು 10.00 ರಿಂದ 11.00 ಗಂಟೆಯವರಗೆ ಜರುಗಿಸಲಾಗಿದ್ದು ಸದರಿ ಸಮಯಕ್ಕೆ ಎರಡು ಭಾವಚಿತ್ರಗಳನ್ನು ತೆಗೆಯಲಾಗಿರುತ್ತದೆ. ಸಾಕ್ಷಿ ಕಡತದಲ್ಲಿನ ಸದರಿ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.9 ಮತ್ತು 10 ಎಂದು ನಿಶಾನೆಗೊಳಿಸಲಾಯಿತು. ಸದರಿ ನಿಪಿ.8 ರ ಸಮಯಕ್ಕೆ ವಶಕ್ಕೆ ಪಡೆದ ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಮು.1 ರಿಂದ 3 ನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 2 ನೇ ಆರೋಪಿ ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು ಆರೋಪಿ ಯನ್ನು ಗುರುತಿಸುವ ಪ್ರಕ್ರಿಯೆಗೆ ಯಾವುದೇ ತಕರಾರು ಇಲ್ಲ ಎಂದು ಮೌಖಿಕವಾಗಿ ನಿವೇದಿಸಿಕೊಂಡಿರುತ್ತಾರೆ.

**ಪಾಟೀಸವಾಲು ಆರೋಪಿತರ ಪರ ಶ್ರೀ ವಿ ಆರ್ ಆರ್ ವಕೀಲರಿಂದಃ**

ಘಟನೆ ನೆಡದ ದಿನದಂದೇ ನಾನು ದೂರನ್ನು ಪಡೆದು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸಾಕ್ಷಿ ಮಾರನೇ ದಿನ ದೂರು ಸ್ವೀಕರಿಸಿ ಪ್ರಕರಣ ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸುಳ್ಳು ದೂರಿನ ಆಧಾರದ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.4 ರ ಪಂಚನಾಮೆಯ ಸಾಕ್ಷಿಧಾರರು

ಚನ್ನಗಿರಿಯಲ್ಲಿ ಇದ್ದರು. ಸದರಿಯವರನ್ನು ಪರಶುರಾಮ ಎಂಬ ಪಿ ಸಿ ಕರೆದುಕೊಂಡು ಬಂದಿರುತ್ತಾರೆ. ನಿಪಿ.4 ನ್ನು ಸ್ಥಳದಲ್ಲೇ ತಯಾರಿಸಿರುತ್ತೇವೆ. ಸದರಿ ದಾಖಲೆಗೆ ಸಾಕ್ಷಿಧಾರರ ಸಹಿಯನ್ನೂ ಸಹ ಸ್ಥಳದಲ್ಲೇ ಪಡೆದುಕೊಂಡಿರುತ್ತೇವೆ. ನಿಪಿ.4 ರ ಪ್ರಿಂಟ್ ನ್ನು ಎಲ್ಲಿ ತೆಗೆದಿರುತ್ತೀರಿ ಎಂದರೆ ಸಾಕ್ಷಿ ಶಾಮೀರ್ ಜಾನ್ ರವರ ಮನೆಯಲ್ಲಿ ತೆಗೆದಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ.5 ರಲ್ಲಿ ಪ್ರಿಂಟರ್ ಕಾಣಿಸುತ್ತಿಲ್ಲ ಎಂದರೆ ಸಾಕ್ಷಿ ವಾಹನದಲ್ಲಿ ಇತ್ತು ಎಂದು ನುಡಿಯುತ್ತಾರೆ. ನಿಪಿ.8 ನ್ನು ದಿಃ 20.07.2020 ರಂದು ಮಾಡಲಾಗಿದೆ. ನಿಪಿ.8ರ ಪಂಚರಿಗೆ ನೋಟೀಸನ್ನು ಜಾರಿ ಮಾಡಿರುತ್ತೇವೆ. ನಿಪಿ.8ರ ಪ್ರಿಂಟ್ ನ್ನು ಆರೋಪಿಯ ಮನೆಯ ಪಕ್ಕದಲ್ಲಿ ತೆಗೆಯಲಾಗಿರುತ್ತದೆ. ಸದರಿ ನಿಪಿ.9 ಮತ್ತು 10 ರಲ್ಲಿ ಪ್ರಿಂಟರ್ ಕಾಣಿಸುತ್ತಿಲ್ಲ ಎಂದರೆ ಸರಿ. ನಾನು ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.4 ಮತ್ತು 8 ನ್ನು ಠಾಣೆಯಲ್ಲೇ ಸೃಷ್ಟಿಮಾಡಲಾಗಿದೆ ಎಂದರೆ ಸರಿಯಲ್ಲ. ನಾನು ಸದರಿ ದಿನಾಂಕದಂದು ಆರೋಪಿತರನ್ನು ಗುರುತಿಸಲು ಹೋಗಿಲ್ಲ ಎಂದರೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪಕರಣಕ್ಕೂ ಯಾವುದೇ ಸಂಬಂಧ ಇಲ್ಲದೆ ಇದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.4 ಮತ್ತು 8 ನ್ನು ಠಾಣೆಯಲ್ಲೇ ಸೃಷ್ಟಿಮಾಡಲಾಗಿದೆ ಎಂದರೆ ಸರಿಯಲ್ಲ. ಸದರಿ ದಿನಾಂಕದಂದು ಆರೋಪಿತರು ಯಾವ ಬಣ್ಣದ ಬಟ್ಟೆ ಧರಿಸಿದ್ದರು ಎಂದರೆ 1 ನೇ ಆರೋಪಿ ಕೆಂಪು ಬಿಳಿ ಬಣ್ಣದ ಟೀ ಶರ್ಟ ಮತ್ತು ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದು ಮತ್ತು 2ನೇ ಆರೋಪಿ ಬಿಳಿ ಕಂದು ಬಣ್ಣದ ಟೀ ಶರ್ಟ ನ್ನು ಮತ್ತು ಜಿನ್ಸ್ ಪ್ಯಾಂಟ್ ನ್ನು ಧರಿಸಿರುತ್ತಾನೆ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಏನನ್ನೂ ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು.)**

**ಓ ಹೇ ಕೇ ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ.**

**01ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ.**